**8. ಸುಸ್ಥಿರತೆ ಮತ್ತು ಸಾಂಸ್ಕೃತಿಕ ಸಂರಕ್ಷಣೆ:**

. ಆಧುನೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಪ್ರದರ್ಶನ ಕಲೆಗಳ ಅಭ್ಯಾಸಗಳನ್ನು ಸಂರಕ್ಷಿಸುವ ಮತ್ತು ಉತ್ತೇಜಿಸುವ ಸವಾಲುಗಳಿಗೆ ಪರಿಹಾರದ ಅನ್ವೇಷಣೆ.

. ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಮತ್ತು ಭವಿಷ್ಯದ ಪೀಳಿಗೆಗೆ ಅದರ ಪ್ರಸರಣದ ಗುರಿಯನ್ನು ಹೊಂದಿರುವ ಉಪಕ್ರಮಗಳ ಪ್ರಾಮುಖ್ಯತೆ.

**9. ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿ:**

. ಸಾಂಸ್ಕೃತಿಕ ವಿನಿಯೋಗ ಮತ್ತು ಪ್ರಾತಿನಿಧ್ಯದ ಸಮಸ್ಯೆಗಳು ಸೇರಿದಂತೆ ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳ ರಚನೆ ಮತ್ತು ಬಳಕೆಯಲ್ಲಿ ಒಳಗೊಂಡಿರುವ ನೈತಿಕ ಪರಿಗಣನೆಗಳ ವಿಶ್ಲೇಷಣೆ.

. ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಸಮಾನತೆಯನ್ನು ಉತ್ತೇಜಿಸುವಲ್ಲಿ ಕಲಾವಿದರು ಮತ್ತು ಮಾಧ್ಯಮ ವೃತ್ತಿಪರರ ಪಾತ್ರದ ಅನ್ವೇಷಣೆ.

**10.ಶಿಕ್ಷಣ ಮತ್ತು ಪ್ರಭಾವ:**

. ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳ ಮೂಲಕ ಸಾಂಸ್ಕೃತಿಕ ಅಭಿಮಾನ ಮತ್ತು ತಿಳುವಳಿಕೆಯನ್ನು ಬೆಳೆಸುವಲ್ಲಿ ಶಿಕ್ಷಣ ಮತ್ತು ಪ್ರಭಾವ ಕಾರ್ಯಕ್ರಮಗಳ ಪಾತ್ರದ ಕುರಿತ ಚರ್ಚೆ.

. ಕಲೆ ಶಿಕ್ಷಣ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯಲ್ಲಿ ನವೀನ ವಿಧಾನಗಳ ಪ್ರಾಮುಖ್ಯತೆ.

**11.ನೃತ್ಯ ಮತ್ತು ಮಾಧ್ಯಮ:**

ಚಲನಚಿತ್ರ, ದೂರದರ್ಶನ ಮತ್ತು ಆನ್ಲೈನ್ (ಅಂತರ್ಜಾಲ) ವೇದಿಕೆಗಳು ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ನೃತ್ಯಪ್ರಕಾರಗಳ ಪ್ರಾತಿನಿಧ್ಯ ಮತ್ತು ವಿಕಸನವನ್ನು ವಿಶ್ಲೇಷಿಸುವುದು.

. ಸಾಮಾಜಿಕ ಮಾಧ್ಯಮ ಮತ್ತು ನೃತ್ಯ ವಿಮರ್ಶೆಯ ಮೇಲೆ ಅದರ ಪ್ರಭಾವ.

. ನೃತ್ಯ ಮತ್ತು ನಾಟಕ ಕಲೆಯ ಆಧುನಿಕ ತಾಂತ್ರಿಕ ರೂಪಾಂತರದ ಕಾಲದಲ್ಲಿ ನಾಟ್ಯಶಾಸ್ತ್ರದಂತಹ ಪ್ರಾಚೀನ ಪಠ್ಯಗಳ ಪ್ರಸ್ತುತತೆ.

. ಸಾಂಪ್ರದಾಯಿಕ ವಿಧಾನಗಳು ಮತ್ತು ಆಧುನಿಕ ತಂತ್ರಗಳಿಗೆ ಸಂಬಂಧಿಸಿದಂತೆ ಕಲೆ, ಕಲಾವಿದರು ಮತ್ತು ತಜ್ಞರು ಎದುರಿಸುತ್ತಿರುವ ಸವಾಲುಗಳು.

**12. ಸಂಗೀತವನ್ನು ಸಮಕಾಲೀನಗೊಳಿಸುವಲ್ಲಿ ಮಾಧ್ಯಮದ ಪಾತ್ರ:**

ಸಮಕಾಲೀನ ಸಂಗೀತ ಪ್ರಕಾರಗಳು ಮತ್ತು ಶೈಲಿಗಳ ವಿಕಾಸ ಮತ್ತು ಪ್ರಸಾರದ ಮೇಲೆ ಮಾಧ್ಯಮದ ಪ್ರಭಾವವನ್ನು ಅನ್ವೇಷಿಸುವುದು.

**13. ಮಾಧ್ಯಮವಾಗಿ ರಂಗಭೂಮಿ:**

ಪ್ರದರ್ಶನ ಮತ್ತು ಕಥೆಗಾರಿಕೆಯ ಆಧುನಿಕ ಮಾಧ್ಯಮ ತಂತ್ರಜ್ಞಾನ ಹಾಗು ವೇದಿಕೆಗಳೊಂದಿಗೆ ಸಾಂಪ್ರದಾಯಿಕ ರಂಗಭೂಮಿಯ ಸಮತೋಲನವನ್ನು ವಿಶ್ಲೇಸಿಸುವುದು.

**14. ಮಾಧ್ಯಮ ಒಕ್ಕೂಟ ಮತ್ತು ಪ್ರದರ್ಶನ ಕಲೆಗಳು**

**15. ಪ್ರದರ್ಶನ ಕಲೆಗಳು ಮತ್ತು ಮಾಧ್ಯಮದ ಪುನರಾವರ್ತಿತ (ವರ್ಚ್ಯುಯಲ್) ತರಗತಿ**

## ಸಂಜೆಯ ಪ್ರದರ್ಶನಗಳು:

ವಿಚಾರ ಸಂಕಿರಣದ ನಂತರ, ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳ ನಡುವಿನ ರೋಚಕ ಸಂವಹನಗಳನ್ನು ಪ್ರತಿಬಿಂಬಿಸುವ ವೈವಿಧ್ಯಮಯ ಪ್ರದರ್ಶನಗಳಲ್ಲಿ ನೀವೂ ಪಾಲ್ಗೊಳ್ಳಿರಿ. ಪ್ರತಿದಿನ ಸಂಜೆ ವಿವಿಧ ವಿಷಯಗಳು ಮತ್ತು ವಿಧಾನಗಳನ್ನು ಅನ್ವೇಷಿಸುವ ಆಸಕ್ತ ಕಲಾವಿದರಿಂದ ವಿಶೇಷ ಪ್ರದರ್ಶನಗಳನ್ನು ಆಯೋಜಿಸಲಾಗುತ್ತದೆ. ಈ ಪ್ರದರ್ಶನಗಳ ಟಿಕೆಟ್ಗಳು ಪ್ರತ್ಯೇಕವಾಗಿ ಲಭ್ಯವಿರುತ್ತವೆ.

## ಸಲ್ಲಿಕೆ ಮಾರ್ಗಸೂಚಿಗಳು:

ಸಾರಾಂಶಗಳು 300 ಪದಗಳಿಗಿಂತ ಹೆಚ್ಚಿರಬಾರದು ಹಾಗೂ ಶೀರ್ಷಿಕೆ, ಲೇಖಕ(ರು) ಸಂಬಂಧ(ಗಳು) ಮತ್ತು ಪ್ರಸ್ತಾವಿತ ಪ್ರಸ್ತುತಿಯ ಸಂಕ್ಷಿಪ್ತ ಅವಲೋಕನವನ್ನು ಒಳಗೊಂಡಿರಬೇಕು.
ಪೂರ್ಣ ಲೇಖನಗಳು 3,000 ಮತ್ತು 5,000 ಪದಗಳ ನಡುವೆ ಇರಬಹುದು. ಸಾರಾಂಶಗಳು ಮತ್ತು ಲೇಖನಗಳನ್ನು ವಿದ್ಯುನ್ಮಾನವಾಗಿ internationalconferenceksgh@gmail.comಗೆ ಸಲ್ಲಿಸಬಹುದು.

## ಪ್ರಮುಖ ದಿನಾಂಕಗಳು:

- ಸಾರಾಂಶ ಸಲ್ಲಿಕೆ ಗಡುವು: **10ನೇ ಮೇ 2024**
- ಪೂರ್ಣ ಲೇಖನಗಳ ಸಲ್ಲಿಕೆ ಗಡುವು: **15ನೇ ಮೇ 2024**
- ಶುಲ್ಕ ಪಾವತಿಯ ಕೊನೆಯ ದಿನಾಂಕ: **15ನೇ ಮೇ 2024**
- ಸಾಮಾನ್ಯ ಭಾಗವಹಿಕೆ: **Rs.1,500/–**
- ಸಂಶೋಧನಾ ವಿದ್ಯಾರ್ಥಿಗಳು/ವಿದ್ಯಾರ್ಥಿಗಳು: **Rs.750/–**
- ಅಂತರರಾಷ್ಟ್ರೀಯ ಭಾಗವಹಿಕೆ: **Rs.2,500/–**

## ನೋಂದಣಿ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- ಎಲ್ಲಾ ವಿಚಾರಸಂಕಿರಣ ಚರ್ಚೆಗಳು ಮತ್ತು ಅಧ್ಯಕ್ಷ ಭಾಷಣಕ್ಕೆ ಪ್ರವೇಶ
- ಸಮ್ಮೇಳನ ಸಾಮಾಗ್ರಿಗಳು
- ಕಾಫಿ ವಿರಾಮಗಳು ಮತ್ತು ಊಟಗಳು
- ಸಂಜೆ ಪ್ರದರ್ಶನಗಳು

## ವಸತಿ ಮತ್ತು ಪ್ರಯಾಣ:

ವಿಶ್ವವಿದ್ಯಾಲಯದ ಸಮೀಪವಿರುವ ವಸತಿ ಆಯ್ಕೆಗಳನ್ನು ವೆಬ್ಸೈಟ್ನಲ್ಲಿ ಕಾಣಬಹುದು. ವಿನಂತಿಯ ಮೇರೆಗೆ ಅಂತರರಾಷ್ಟ್ರೀಯ ಅಭ್ಯರ್ಥಿಗಳಿಗೆ ಪ್ರಯಾಣದ ನೆರವು ಒದಗಿಸಲಾಗುವುದು.

## ಸಂಪರ್ಕ:

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ವಿಚಾರ ಸಂಕಿರಣ ಸಂಘಟನಾ ಸಮಿತಿಯನ್ನು ಸಂಪರ್ಕಿಸಿ
ಡಾ. ಚಂದನ್ ಜಯದೇವ್ 9964387644
ಡಾ. ಉದಯ್. ಎಸ್. ಆರ್ 9535831039
ಡಾ. ಶೋಭಾ 9886045492
ಡಾ. ಸಂಧ್ಯಾ ಭಟ್ – 97418 91434
ಡಾ. ಪ್ರಶಾಂತ್ ವೇಣುಗೋಪಾಲ್ – 88845 45415

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,
ಮೈಸೂರು

ಕರ್ನಾಟಕ ರಾಜ್ಯ ಸಂವಹನ
ಮತ್ತು ಪತ್ರಿಕೋದ್ಯಮ ಶಿಕ್ಷಕರ ಸಂಘದ
ಸಹಯೋಗದೊಂದಿಗೆ

ಅಂತರರಾಷ್ಟ್ರೀಯ ವಿಚಾರ ಸಂಕಿರಣ

# ಪ್ರದರ್ಶನ ಕಲೆ ಮತ್ತು ಮಾಧ್ಯಮ : ಸಾಂಸ್ಕೃತಿಕ ದೃಷ್ಟಿಕೋನಗಳು

**ದಿನಾಂಕ:** ಮೇ 21 ಮತ್ತು 22, 2024

**ಸ್ಥಳ:** ಕರ್ನಾಟಕ ರಾಜ್ಯ ಡಾ. ಗಂಗುಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು



## ವಿಶ್ವ ವಿದ್ಯಾಲಯದ ಬಗ್ಗೆ:

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನ ಹೃದಯದಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಡಾ. ಗಂಗುಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಒಂದು ಸಾಂಸ್ಕೃತಿಕ ಅಸ್ಮಿತೆಯ ಚಿಹ್ನೆಯಾಗಿ ರೂಪುಗೊಂಡಿದೆ. ಇದು ಪ್ರದರ್ಶನ ಕಲೆಗಳ ಸಂರಕ್ಷಣೆ, ಪ್ರಸಾರ ಮತ್ತು ಬೆಳವಣಿಗೆಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ. 2008ರಲ್ಲಿ ಸ್ಥಾಪಿತವಾದ ಈ ವಿಶ್ವವಿದ್ಯಾಲಯಕ್ಕೆ ಪ್ರಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕಿ ಡಾ. ಗಂಗುಬಾಯಿ ಹಾನಗಲ್ ಅವರ ಹೆಸರಿಡಲಾಗಿದೆ.

ಈ ವಿಶ್ವವಿದ್ಯಾಲಯದಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ, ನೃತ್ಯ (ಭರತನಾಟ್ಯ, ಕಥಕ್, ಕುಚಿಪುಡಿ, ಯಕ್ಷಗಾನ ಮತ್ತು ಜಾನಪದೀಯ ನೃತ್ಯಗಳು), ನಾಟಕ ಮತ್ತು ದೃಶ್ಯ ಕಲೆಗಳಂತಹ ವಿಭಿನ್ನ ವಿಷಯಗಳ ಕುರಿತ ತರಗತಿಗಳನ್ನು ಸಮರ್ಥವಾಗಿ ನಡೆಸಲಾಗುತ್ತಿದೆ. ಹೆಸರಾಂತ ಅಧ್ಯಾಪಕ ವರ್ಗ, ಅತ್ಯಾಧುನಿಕ ಸೌಲಭ್ಯಗಳು ಮತ್ತು ರೋಮಾಂಚಕ ಕಲಿಕಾ ವಾತಾವರಣವು ಕಲಿಕೆಯ ಘನತೆಯನ್ನು ಹೆಚ್ಚಿಸುತ್ತವೆ ಮತ್ತು ಮುಂದಿನ ಪೀಳಿಗೆಯ ಕಲಾವಿದರು ಮತ್ತು ವಿದ್ವಾಂಸರನ್ನು ಪೋಷಿಸುತ್ತವೆ.

ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಜೊತೆಗೆ ವಿಶ್ವವಿದ್ಯಾಲಯವು ಶೈಕ್ಷಣಿಕ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಔಟ್ರೀಚ್/ ಪ್ರಚಾರ ಕಾರ್ಯಕ್ರಮಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಮುದಾಯದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ವಾರ್ಷಿಕ ಅಂತರರಾಷ್ಟ್ರೀಯ ರಂಗಭೂಮಿ ಉತ್ಸವವು, ಭೌಗೋಳಿಕ ಗಡಿಗಳ ಎಲ್ಲೆಯನ್ನು ಮೀರಿ ಕಲಾವಿದರ ನಡುವಿನ ಸಂಬಂಧ ಮತ್ತು ಸಹಯೋಗವನ್ನು ಬೆಳೆಸುವ ವಿಶ್ವವಿದ್ಯಾಲಯದ ಉದ್ದೇಶಕ್ಕೆ ಸಾಕ್ಷಿಯಾಗಿದೆ.

ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳ ಕುರಿತು ಈ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸುವುದು, ಈ ಎರಡೂ ಕ್ರಿಯಾತ್ಮಕ ಕ್ಷೇತ್ರಗಳ ವಿಕಸನದ ಹಾದಿಯನ್ನು ಅನ್ವೇಷಿಸುವ ವಿಶ್ವವಿದ್ಯಾಲಯದ ಧ್ಯೇಯದೊಂದಿಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗುತ್ತದೆ. ಆಸಕ್ತಿದಾಯಕ ಸಂವಾದವನ್ನು ಉತ್ತೇಜಿಸಲು ಹಾಗೂ ಸಮಾಜದ ಸಾಂಸ್ಕೃತಿಕ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಪ್ರದರ್ಶನ ಕಲೆ ಮತ್ತು ಮಾಧ್ಯಮದ ಶಕ್ತಿಯನ್ನು ಕುರಿತು ಚರ್ಚಿಸಲು, ಮೈಸೂರಿನಲ್ಲಿ ನಮ್ಮೊಂದಿಗೆ ಜೊತೆಗೂಡಲು ನಿಮ್ಮನ್ನು ಆಹ್ವಾನಿಸುತ್ತೇವೆ.

## ವಿಚಾರ ಸಂಕಿರಣದ ಬಗ್ಗೆ:

ಜಾಗತೀಕರಣದ ಯುಗದಲ್ಲಿ, ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳು ಸಾಂಸ್ಕೃತಿಕ ಅಭಿವ್ಯಕ್ತಿ, ಸಂಸ್ಕೃತಿ ವಿನಿಮಯ ಮತ್ತು ತಿಳುವಳಿಕೆಗೆ ಪ್ರಬಲವಾದ ಮಾರ್ಗಗಳಾಗಿ ಕಾರ್ಯನಿರ್ವಹಿಸುತ್ತವೆ. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಕರ ಸಂಘದ ಸಹಯೋಗದೊಂದಿಗೆ "ಪ್ರದರ್ಶನ ಕಲೆಗಳು ಮತ್ತು ಮಾಧ್ಯಮ: ಸಾಂಸ್ಕೃತಿಕ ದೃಷ್ಟಿಕೋನಗಳು" ವಿಷಯ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿವಿಧ ಸಾಂಸ್ಕೃತಿಕ ದೃಷ್ಟಿಕೋನಗಳ ಶ್ರೀಮಂತ ಹೊಳಹುಗಳನ್ನು ಅಧ್ಯಯನ ಮಾಡಲು ನಿಮ್ಮನ್ನು ಆತ್ಮೀಯವಾಗಿ ಆಹ್ವಾನಿಸುತ್ತದೆ. ಈ ವಿಶೇಷ ಕಾರ್ಯಕ್ರಮವು ಕಲಾ ಪ್ರಕಾರಗಳು ಮತ್ತು ಅವು ಪ್ರತಿನಿಧಿಸುವ ವೈವಿಧ್ಯಮಯ ಸಂಸ್ಕೃತಿಗಳ ನಡುವಿನ ಸಂಕೀರ್ಣವಾದ ಕೊಡುಕೊಳ್ಳುವಿಕೆಯ ಪ್ರಕ್ರಿಯೆಯ ಮೇಲೆ ಸಂವಾದ, ಸಹಯೋಗ ಮತ್ತು ಸಂಭ್ರಮಾಚರಣೆಗಳ ಮೂಲಕ ಬೆಳಕು ಚೆಲ್ಲ ಬಯಸುತ್ತದೆ.

## ಸಾಂಸ್ಕೃತಿಕ ದೃಷ್ಟಿಕೋನಗಳ ಗ್ರಹಿಕೆ:

ಸಾಂಸ್ಕೃತಿಕ ದೃಷ್ಟಿಕೋನಗಳನ್ನು ಪ್ರದರ್ಶನ ಕಲೆ ಮತ್ತು ಮಾಧ್ಯಮಗಳ ಮಸೂರದ ಮೂಲಕ ಗ್ರಹಿಸುವ ಆಳವಾದ ಬದ್ಧತೆಯೊಂದಿಗೆ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಸಂಗೀತ, ನೃತ್ಯ, ರಂಗಭೂಮಿ, ಚಲನಚಿತ್ರ ಅಥವಾ ಡಿಜಿಟಲ್ ಮಾಧ್ಯಮದಂತಹ ಅಭಿವ್ಯಕ್ತಿಯ ಪ್ರಕಾರಗಳು, ಪ್ರಪಂಚದಾದ್ಯಂತದ ವೈವಿಧ್ಯಮಯ ಸಮುದಾಯಗಳ ಸೂಕ್ಷ್ಮತೆ, ಮೌಲ್ಯಗಳು ಮತ್ತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ. ಸಂಸ್ಕೃತಿಯು ಸೃಜನಶೀಲತೆ ಮತ್ತು ಸಂವಹನದೊಂದಿಗೆ ಹೇಗೆ ಬೆಸೆದುಕೊಂಡಿದೆ ಎಂಬುದನ್ನು ಅನ್ವೇಷಿಸುವ ಮೂಲಕ, ಅಭ್ಯರ್ಥಿಗಳು ಪ್ರದರ್ಶನ ಕಲೆಗಳು ಮತ್ತು ಮಾಧ್ಯಮದ ಸಂರಚನೆ, ಸವಾಲು ಮತ್ತು ಸಾಂಸ್ಕೃತಿಕ ಅಸ್ಮಿತೆಗಳನ್ನು ಪರಿಶೀಲಿಸುವ ವಿಧಾನಗಳ ಕುರಿತು ಹೊಸ ಒಳನೋಟಗಳನ್ನು ಪಡೆಯುತ್ತಾರೆ.

## ಲೇಖನಗಳ ಆಹ್ವಾನ:

ನಾವು ಕಲಾವಿದರು, ವಿದ್ವಾಂಸರು, ಆಸಕ್ತರು ಮತ್ತು ಮಾಧ್ಯಮ ವಲಯದ ವೃತ್ತಿಪರರನ್ನು ಪ್ರದರ್ಶನ ಕಲೆಗಳು, ಮಾಧ್ಯಮ ಮತ್ತು ಜನಾಂಗೀಯ ವಾಸ್ತವಗಳ ನಡುವಿನ ಕ್ರಿಯಾ ಸಂಬಂಧದ ಕುರಿತ ಘನಾತ್ಮಕ ಸಂವಾದಗಳಲ್ಲಿ ತೊಡಗಿಸಿಕೊಳ್ಳಲು ಈ ಮೂಲಕ ಎಲ್ಲರನ್ನು ಆಹ್ವಾನಿಸುತ್ತೇವೆ. ಈ ಎರಡು ದಿನಗಳ ವಿಚಾರ ಸಂಕಿರಣವು ಸಂಶೋಧನೆ ಮತ್ತು ಕಲಾತ್ಮಕ ಪರಿಶೋಧನೆಗಳನ್ನು ಕೇಂದ್ರೀಕರಿಸುತ್ತದೆ:

**1. ಸಾಂಸ್ಕೃತಿಕ ಅಸ್ಮಿತೆ ಮತ್ತು ಪ್ರಾತಿನಿಧ್ಯ:**

. ಸಾಂಸ್ಕೃತಿಕ ಅಸ್ಮಿತೆ ಮತ್ತು ನಿರೂಪಣೆಗಳನ್ನು ರೂಪಿಸುವಲ್ಲಿ ಪ್ರದರ್ಶನ ಕಲೆಗಳು ಮತ್ತು ಮಾಧ್ಯಮದ ಪಾತ್ರದ ಅನ್ವೇಷಣೆ.

. ಸಾಂಸ್ಕೃತಿಕ ಮಾಧ್ಯಮದಲ್ಲಿ ಧೃಢೀಕೃತತೆ, ಸಾಮಾನ್ಯೀಕರಣ ಮತ್ತು ಪ್ರಾತಿನಿಧ್ಯದ ಸಮಸ್ಯೆಗಳನ್ನು ವಿಶ್ಲೇಷಿಸುವುದು.

**2. ಸಾಂಪ್ರದಾಯಿಕ ಮತ್ತು ಸಮಕಾಲೀನ ಅಭಿವ್ಯಕ್ತಿಗಳ ತುಲನೆ:**

. ಆಧುನಿಕರಣ ಮತ್ತು ಜಾಗತೀಕರಣಕ್ಕೆ ಮುಖಾಮುಖಿಯಾಗಿ ಸಾಂಸ್ಕೃತಿಕ ಪ್ರದರ್ಶನ ಕಲೆಗಳ ವಿಕಸನದ ವಿಶ್ಲೇಷಣೆ.

. ಸಂಪ್ರದಾಯವನ್ನು ನಾವೀನ್ಯತೆಯೊಂದಿಗೆ ಸಂಯೋಜಿಸುವ ಸಮಕಾಲೀನ ಸ್ವರೂಪಗಳ ಬೆಳವಣಿಗೆಯನ್ನು ವಿಶ್ಲೇಷಿಸುವುದು.

**3. ಜಾಗತೀಕರಣ ಮತ್ತು ಸಂಕರೀಕರಣ:**

. ಜಾಗತೀಕರಣವು ಸಾಂಸ್ಕೃತಿಕ ವಿನಿಮಯ ಮತ್ತು ವೈವಿಧ್ಯಮಯ ಕಲಾತ್ಮಕ ಸಂಪ್ರದಾಯಗಳ ಸಮ್ಮಿಲನವನ್ನು ಹೇಗೆ ಸುಗಮಗೊಳಿಸಿದೆ ಎಂಬುದರ ಅನ್ವೇಷಣೆ.

. ಸಂಕರೀಕರಣದ ಪರಿಕಲ್ಪನೆ ಮತ್ತು ಅದು ಸಾಂಸ್ಕೃತಿಕ ಧೃಢೀಕರಣ ಹಾಗೂ ವೈವಿಧ್ಯದ ಮೇಲೆ ಬೀರಿದ ಪರಿಣಾಮಗಳ ಕುರಿತ ಚರ್ಚೆ.

**4. ಅಧಿಕಾರದ ಕ್ರಿಯಾತ್ಮಕತೆ ಹಾಗೂ ಸಾಮಾಜಿಕ ಅಂಚಿನಲ್ಲಿರುವವರ ಧ್ವನಿಗಳು:**

. ಪ್ರದರ್ಶನ ಕಲೆಗಳು ಮತ್ತು ಮಾಧ್ಯಮಗಳಲ್ಲಿ ತಳಸಮುದಾಯಗಳ ಪ್ರಾತಿನಿಧ್ಯದ ಮೇಲೆ ಅಧಿಕಾರ ಸಂರಚನೆಗಳ ಪ್ರಭಾವದ ಕುರಿತ ವಿಶ್ಲೇಷಣೆ.

. ತಳಸಮುದಾಯಗಳ ಧ್ವನಿಗಳನ್ನು ವರ್ಧಿಸಲು ಮತ್ತು ಅವುಗಳ ಆಂತರಿಕ ಸಾಂಸ್ಕೃತಿಕ ನಿರೂಪಣೆಗಳನ್ನು ಉತ್ತೇಜಿಸುವ ವಿಧಾನಗಳ ಪ್ರಾಮುಖ್ಯತೆ ಕುರಿತ ವಿಶ್ಲೇಷಣೆ.

**5. ತಂತ್ರಜ್ಞಾನ ಮತ್ತು ನಾವೀನ್ಯತೆ:**

. ಪ್ರದರ್ಶನ ಕಲೆಗಳು ಮತ್ತು ಮಾಧ್ಯಮದ ರಚನೆ, ಪ್ರಸಾರ ಮತ್ತು ಬಳಕೆಯ ಮೇಲೆ ತಂತ್ರಜ್ಞಾನದ ಪರಿವರ್ತಕ ಪ್ರಭಾವದ ಕುರಿತ ಅಧ್ಯಯನ.

. ಪ್ರೇಕ್ಷಕರ ತೊಡಗಿಸಿಕೊಳ್ಳುವಿಕೆ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಹೆಚ್ಚಿಸುವಲ್ಲಿ ತಂತ್ರಜ್ಞಾನದ ನವೀನ ಬಳಕೆಗಳ ಅನ್ವೇಷಣೆ.

**6. ಸಾಂಸ್ಕೃತಿಕ ರಾಜತಾಂತ್ರಿಕತೆ ಮತ್ತು ಸೂಕ್ಷ್ಮ ಶಕ್ತಿ:**

. ಅಂತರರಾಷ್ಟ್ರೀಯ ವೇದಿಕೆಯಲ್ಲಿ ಸಾಂಸ್ಕೃತಿಕ ರಾಜತಾಂತ್ರಿಕತೆ ಮತ್ತು ಸೂಕ್ಷ್ಮ ಶಕ್ತಿ ಪ್ರಕ್ಷೇಪಣದಲ್ಲಿ ಪ್ರದರ್ಶನ ಕಲೆಗಳು ಮತ್ತು ಮಾಧ್ಯಮದ ಪಾತ್ರದ ವಿಶ್ಲೇಷಣೆ.

. ರಾಜತಾಂತ್ರಿಕ ಉದ್ದೇಶಗಳಿಗಾಗಿ ಸಾಂಸ್ಕೃತಿಕ ಸ್ವತ್ತುಗಳನ್ನು ನಿಯಂತ್ರಿಸಿರುವ ಪ್ರಕರಣಗಳ ಅಧ್ಯಯನ ಮತ್ತು ಉತ್ತಮ ಅಭ್ಯಾಸಗಳ ಕುರಿತ ಚರ್ಚೆ.

**7. ಪ್ರೇಕ್ಷಕರ ಒಳಗೊಳ್ಳುವಿಕೆ ಮತ್ತು ಭಾಗವಹಿಸುವಿಕೆ:**

. ತಲ್ಲೀನಗೊಳಿಸುವ ಅನುಭವಗಳು ಮತ್ತು ಭಾಗವಹಿಸುವ ಪ್ರಕ್ರಿಯೆಗಳ ಮೂಲಕ ಪ್ರದರ್ಶನ ಕಲೆಗಳಲ್ಲಿ ಪ್ರೇಕ್ಷಕರನ್ನು ತೊಡಗಿಸಿಕೊಳ್ಳುವ ಸಂವಾದಾತ್ಮಕ ವಿಧಾನಗಳ ಅನ್ವೇಷಣೆ.

. ಸಾಂಸ್ಕೃತಿಕ ಅಭಿಮಾನ ಮತ್ತು ಸಂವಾದವನ್ನು ಬೆಳೆಸುವಲ್ಲಿ ಸಮುದಾಯ ಆಧಾರಿತ ಉಪಕ್ರಮಗಳ ಪಾತ್ರದ ಕುರಿತ ಚರ್ಚೆ.